ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು : ಈ ಪ್ರಶ್ನೆ ಇರುವುದು ಚಿಂಚೋಳಿ ತಾಲ್ಲೂಕು ಬಗ್ಗೆ. ಇದು ಜನರಲ್ ಕ್ವೊಶ್ಚನ್ ಅಲ್ಲ. ಶ್ರೀ ಕಟ್ಟಿಮನಿಯವರು ತಾವು ಪ್ರಶ್ನೆ ಕೇಳಿ. ಸದಸ್ಯರು ಗೈರುಹಾಜರಿದ್ದಾರೆ. ಮುಂದಿನ ಪ್ರಶ್ನೆ ಕಡೋಲ್ಕರ್ ತಾವು ಕೇಳಿ.

ಗೊಂದಲ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮಠಾಠಿ ಭಾಷೆಯ ಪ್ರಶ್ನೆ ಪತ್ರಿಕೆಗಳ ಮುದ್ರಣದಲ್ಲಿ ತಪ್ಪುಗಳು ಆಗಿರುವ ಬಗ್ಗೆ

171 (1576) ಶ್ರೀ ಮನೋಹರ ಪೊನ್ನಪ್ಪ ಕಾಡೊಲ್ಕರ್ (ಉಚ್ಚಗಾಂವ) - ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಎಸ್ ಎಸ್ ಎಲ್ ಸಿ ಪರೀಕ್ಷೆಯ ಮರಾಠಿ ಭಾಷೆಯ ಪ್ರಶ್ನೆ ಪತ್ರಿಕೆಯ ಮುದ್ರಣದಲ್ಲಿ ತಪ್ಪುಗಳು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಮುದ್ರಣದ ತಪ್ಪಿನಿಂದಾಗಿ ಮುಗ್ಧ ವಿದ್ಯಾರ್ಥಿಗಳ ಮರಣ ಹೊಂದಿದ್ದು ಈ ರೀತಿಯ ತಪ್ಪುಗಳನ್ನು ತಪ್ಪಿಸಲು ತೆಗೆದುಕೊಂಡ ಕ್ರಮಗಳೇನು?

3. ತಪ್ಪುಗಳನ್ನು ನಿವಾರಿಸುವ ದೃಷ್ಟಿಯಿಂದ ಎಸ್ ಎಸ್ ಎಲ್ ಸಿ ಪರೀಕ್ಷಾ ವಿಧಾನದಲ್ಲಿ ವಿಕೇಂದ್ರಿಕರಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಪ್ರೊ।। ಬಿ.ಕೆ. ಚಂದ್ರಶೇಖರ್ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು :

1. ಮಾರ್ಚ್ 2002 ರ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಮರಾಠಿ ಮಾಧ್ಯಮದ ಗಣಿತ ಪ್ರಶ್ನೆ ಪತ್ರಿಕೆಗಳಲ್ಲಿ ತಪ್ಪಾಗಿದ್ದು ಇದರಿಂದಾಗಿ ವಿದ್ಯಾರ್ಥಿಗಳಿಗೆ ಅನಾನುಕೂಲ ಉಂಟಾಗಿರುತ್ತದೆ.

ಈ ಬಗೆಗೆ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಅನ್ವಯಿಸುವಂತೆ ಮೂಲ ಪ್ರಶ್ನೆ ಪತ್ರಿಕೆಗಳು ಕನ್ನಡ ಹಾಗೂ ಆಂಗ್ಲ ಭಾಷೆಗಳಲ್ಲಿ ಗೌಪ್ಯವಾಗಿ ತಯಾರಿಸಲ್ಪಡುತ್ತವೆ. ಉಳಿದ ಮಾಧ್ಯಮಗಳಲ್ಲಿ ಭಾಷಾಂತರವನ್ನು ಕರ್ನಾಟಕದಲ್ಲಿಯೇ ಮಾಡಿಸಲಾಗುತ್ತಿತ್ತು. ಇದನ್ನು ಬದಲಾಯಿಸಿ ಮುದ್ರಕರ ಹಂತದಲ್ಲಿಯೇ ಭಾಷಾಂತರವನ್ನು ಪ್ರಾಯೋಗಿಕವಾಗಿ 2001 ರ ಪರೀಕ್ಷೆಗೆ ಮಾಡಿಸಲಾಗಿತ್ತು. ಅಂತಹ ಸಂದರ್ಭದಲ್ಲಿ ಭಾಷಾಂತರದ ಬಗೆಗೆ ಯಾವ ದೋಷವು : ಆಕ್ಷೇಪಣೆಗಳು ಬಂದಿರುವುದಿಲ್ಲ. ಮರಾಠಿ ಭಾಷೆಯು ಮಹಾರಾಷ್ಟ್ರದ ಭಾಷೆಯಾಗಿರುವುದರಿಂದ ಮರಾಠಿ ಪ್ರಶ್ನೆ ಪತ್ರಿಕೆಯ ಭಾಷಾಂತರವನ್ನು ಪ್ರಶ್ನೆ ಪತ್ರಿಕೆಗಳ ಗೌಪ್ಯತೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಮುದ್ರಕರ ಹಂತದಲ್ಲಿಯೇ ಮರಾಠಿ ಭಾಷೆಯ ಪರಿಣತರಿಂದ ಮಾಡಿಸಲಾಗಿರುತ್ತದೆ. ಆದುದರಿಂದ ಮಾರ್ಚ್ 2002 ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿಯೆ ಸಹ ಮರಾಠಿ ಮಾಧ್ಯಮದ ಗಣಿತ ಪ್ರಶ್ನೆ ಪತ್ರಿಕೆಯನ್ನು ಮುದ್ರಕರ ಹಂತದಲ್ಲಿ ಮಾಡಿಸಲಾಗಿದೆ.

ಪ್ರಸ್ತುತ ವರ್ಷ ಅಂದರೆ 2002 ರ ವರ್ಷದ ಎಸ್ ಎಸ್ ಎಲ್ ಸಿ ಪರೀಕ್ಷೆಯ ಮರಾಠಿ ಮಾಧ್ಯಮದ ಗಣಿತ ವಿಷಯದ ಪ್ರಶ್ನೆ ಪತ್ರಿಕೆಯಲ್ಲಿ (ಭಾಷಾಂತರಿಸುವಲ್ಲಿ) ತಪ್ಪು : ದೋಷಗಳು ಉಂಟಾಗಿರುತ್ತವೆ.

ಈ ರೀತಿಯ ತಪ್ಪಿನಿಂದಾಗಿ ವಿದ್ಯಾರ್ಥಿಗಳಿಗೆ ಅನಾನುಕೂಲ ಉಂಟಾಗಿರುವುದು ಗಮನಕ್ಕೆ ಬಂದಿದೆ. ವಿದ್ಯಾರ್ಥಿಗಳಿಗೆ ಆಗಿರುವ ಅನಾನುಕೂಲವನ್ನು ನಿವಾರಿಸಲು : ಸರಿದೂಗಿಸಲು ಭಾಷಾಂತರ ಸರಿಯಾಗಿರುವ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಪಡೆದಿರುವ ಅಂಕಗಳ ಸಮ ಪ್ರಮಾಣದಲ್ಲಿ ಭಾಷಾಂತರ ದೋಷ ಇರುವ ಪ್ರಶ್ನೆಗಳಿಗೆ ವೈಟೇಜ್ ನೀಡಲಾಗಿದೆ. ಅಲ್ಲದೆ ಮರಾಠಿ ಮಾಧ್ಯಮದ ಗಣಿತ ವಿಷಯದ ಮೌಲ್ಯಮಾಪನವನ್ನು ನಿರ್ದೇಶಕರು ಇವರ ಮೇಲ್ವಿಚಾರಣೆಯಲ್ಲಿ ನಡೆಸಿ ವಿದ್ಯಾರ್ಥಿಗಳಿಗೆ ಉಂಟಾಗಿರುವ ಅನ್ಯಾಯವನ್ನು ಸರಿದೂಗಿಸಲಾಗಿದೆ. ಅಲ್ಲದೆ ಪ್ರತಿ ವರ್ಷಕ್ಕಿಂತಲೂ ಈ ವರ್ಷ ಅಂದರೆ 2002 ರ ಸಾಲಿನಲ್ಲಿ ಮರಾಠಿ ಗಣಿತ ವಿದ್ಯಾರ್ಥಿಗಳು ಸರಾಸರಿ ಹೆಚ್ಚಿನ ಸಂಖ್ಯೆಯಲ್ಲಿ ಪಾಸಾಗಿರುತ್ತಾರೆ.

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ವಿಭಾಗೀಯ ಕಚೇರಿಗಳನ್ನು ಈಗಾಗಲೇ ತೆರೆಯಲಾಗಿದ್ದು, ವಿಭಾಗೀಯ ಕಚೇರಿಗಳು ಮಂಡಳಿಯಿಂದ ನಡೆಸುವ ಪರೀಕ್ಷಾ ಕಾರ್ಯಗಳಿಗೆ ಅನ್ವಯಿಸುವಂತೆ ಕಾರ್ಯನಿರ್ವಹಿಸುತ್ತಿವೆ.

ಶ್ರೀ ಮನೋಹರ್ ಪೊನ್ನಪ್ಪ ಕಾಡೋಲ್ಕರ್ : ಮಾನ್ಯ ಅಧ್ಯಕ್ಷರೇ ....

ಅಧ್ಯಕ್ಷರು : ನಾನು ಈಗ ಯಾರನ್ನು ಕರೆದಿದ್ದೇನೆ ಅವರು ಮಾತನಾಡಿದ್ದನ್ನು ಮಾತ್ರ ಬರೆದುಕೊಳ್ಳಿ. ಬೇರೆಯವರು ಮಾತನಾಡಿದ್ದನ್ನು ಬರೆದುಕೊಳ್ಳಬೇಡಿ.

ಗೊಂದಲ

ಅಧ್ಯಕ್ಷರು : ಈಗ ನಮ್ಮ ಮುಂದೆ ಪ್ರಶ್ನೆ ಇರುವುದು ಚಿಂಚೋಳಿ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ. ತಾವು ಬೇರೆ ಪ್ರಶ್ನೆ ಕಳುಹಿಸಿ ಕೊಡಿ.

ಗೊಂದಲ

ಶ್ರೀ ಮನೋಹರ್ ಪೊನ್ನಪ್ಪ ಕಾಡೋಲ್ಕರ್ : (ಮಾನ್ಯ ಸದಸ್ಯರು ಮರಾಠಿಯಲ್ಲಿ ಮಾತನಾಡಿದ್ದರಿಂದ ರೆಕಾರ್ಡ್ ಆಗಿರುವುದಿಲ್ಲ)

ಗೊಂದಲ

ಶ್ರೀ ಮನೋಹರ್ ಪೊನ್ನಪ್ಪ ಕಾಡೋಲ್ಕರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಎಜ್ಯುಕೇಷನ್ ಮಿನಿಸ್ಟರ್ ಯಾವ ಪ್ರಕಾರ ಉತ್ತರ ಕೊಟ್ಟಿದ್ದರೆ ಅದು ಸರಿ ಇಲ್ಲ. ಅವರು ಸಮರ್ಪಕವಾದ ಉತ್ತರ ಕೊಟ್ಟಿಲ್ಲ. ಅವರು ಬರೀ ಗಣಿತ ಪ್ರಶ್ನೆ ಪತ್ರಿಕೆಯಲ್ಲಿ ಮಾತ್ರ ಮಿಸ್ಟೇಕ್ ಆಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಬರೀ ಗಣಿತ ಪ್ರಶ್ನೆ ಪತ್ರಿಕೆಯಲ್ಲಿ ಮಿಸ್ಟೇಕ್ ಆಗಲಿಲ್ಲ. ಗಣಿತ ಪ್ರಶ್ನೆ ಪತ್ರಿಕೆಯಲ್ಲಿ ಸುಮಾರು 41 ಅಂಕಗಳಷ್ಟು ಮಿಸ್ಟೇಕ್ ಆಗಿದೆ. ಮತ್ತು ವಿಜ್ಞಾನ ಪ್ರಶ್ನೆ ಪತ್ರಿಕೆ ಒಂದು ಮತ್ತ ಎರಡನೇ ಪತ್ರಿಕೆಯಲ್ಲಿ ಸುಮಾರು 53 ಅಂಗಳಷ್ಟು ಮಿಸ್ಟೇಕ್ ಮಾಡಿದ್ದಾರೆ. ಯಾವ ಪ್ರಕಾರ ಟೆಕ್ಸ್ಟ್‌ಬುಕ್‌ನಲ್ಲಿ ಇರುವ ಹಾಗೆ ಪ್ರಶ್ನೆಗಳು ಬರಬೇಕಾಗಿತ್ತು ಆ ಪ್ರಕಾರ ಕ್ವೊಶ್ಚನ್ಸ್ ಬರಲಿಲ್ಲ. ಎಕ್ಸ್‌ಪರ್ಟ್ಸ್ ಅವರು ಮಹಾರಾಷ್ಟ್ರ ಎಕ್ಸ್‌ಪರ್ಟ್ ಕಡೆಯಿಂದ ಈ ಕ್ವೊಶ್ಚನ್ ಪೇಪರ್ ರೆಡಿ ಮಾಡಿಸಿದ್ದೇವೆಂದು ಹೇಳಿದ್ದಾರೆ. ಅದು ತಪ್ಪು. ಯಾವ ಪ್ರಕಾರ ಟೆಕ್ಸ್ಟ್‌ಬುಕ್‌ನಲ್ಲಿದೆ ಆ ಪ್ರಕಾರ ಕ್ವೊಶ್ಚನ್ ಪೇಪರ್ ಬರಬೇಕಾಗಿತ್ತು ಆ ಪ್ರಕಾರ ಬರಲಿಲ್ಲ. ಉದಾಹರಣೆಗೆ ನಾನು ಹೇಳುತ್ತೇನೆ. ಪ್ರಶ್ನೆ ಪತ್ರಿಕೆಯಲ್ಲಿ ತಪ್ಪು ಕ್ವೊಶ್ಚನ್ ಅವರು ಕೇಳಿದ್ದಾರೆ.

(ಮಾನ್ಯ ಸದಸ್ಯರು ಮರಾಠಿಯಲ್ಲಿ ಮಾತನಾಡಿದರು)

ಇದು ಕರೆಕ್ಟ್ ಕ್ವೊಶ್ಚನ್. ಈ ಕ್ವೊಶ್ಚನ್ ಅವರು ಕೇಳಬೇಕಾಗಿತ್ತು, ಅವರು ತಪ್ಪು ಕ್ವೊಶ್ಚನ್ ಕೇಳಿದ್ದಾರೆ. ಇದು ಇಂಪ್ರಾಪರ್ ಕ್ವೊಶ್ಚನ್ ಆಗಿದೆ. ಗಣಿತದಲ್ಲಿ 41 ಅಂಕಗಳಷ್ಟು ಮಿಸ್ಟೇಕ್ ಆಗಿದೆ. ಮತ್ತು ವಿಜ್ಞಾನ ಒಂದು ಮತ್ತು ಎರಡನೇ ಪತ್ರಿಕೆಯಲ್ಲಿ 53 ಅಂಕಗಳಷ್ಟು ಮಿಸ್ಟೇಕ್ ಆಗಿದೆ. ಅದಕೋಸ್ಕರ ನಾನು ಮಾನ್ಯ ಎಜ್ಯುಕೇಷನ್ ಮಿನಿಸ್ಟರ್‌ಗೆ ಸ್ವಲ್ಪ ಇಂಗ್ಲೀಷ್‌ನಲ್ಲಿ ಮಾತನಾಡುತ್ತೇನೆ. Why there are mistakes for 53 marks occurred in Marathi Language Science I & II Papers, and mistakes for 41 marks in Mathematics Question Paper. Examination plays important role in students' lives. But why you have done these mistakes? what do you think of the students committing suicides? ಆ ವಿದ್ಯಾರ್ಥಿಗಳಿಗೆ ಏನಾಗುತ್ತದೆ ಅಂದರೆ ....

ಗೊಂದಲ

ಅಧ್ಯಕ್ಷರು : ಮರಾಠಿ, ಇಂಗ್ಲೀಷ್ ಮತ್ತು ಕನ್ನಡದಲ್ಲಿ ಒಂದೇ ಪ್ರಶ್ನೆಯನ್ನು ಕೇಳಿದ್ದೀರಿ.

ಗೊಂದಲ

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಹೇಳಿ. ಮಾನ್ಯ ಮಂತ್ರಿಗಳ ಉತ್ತರ ಮಾತ್ರ ಬರೆದುಕೊಳ್ಳಿ. ಬೇರೆಯವರು ಮಾತನಾಡಿದ್ದನ್ನು ಬರೆದುಕೊಳ್ಳಬೇಡಿ. ತಾವೆಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು. ತಮಗೂ ಕೊಡುತ್ತೇನೆ ಅವಕಾಶ.

ಗೊಂದಲ

ಪ್ರೊ।। ಬಿ.ಕೆ. ಚಂದ್ರೇಶೇಖರ್ : (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೇ ಕಳೆದ ವರ್ಷ ಅಂದರೆ 2001ನೇ ವರ್ಷದಲ್ಲಿ ಪ್ರಾಯೋಗಿಕವಾಗಿ ಭಾಷಾಂತರವನ್ನು....

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಕಂಡೋಲ್ಕರ್‌ರವರ ಕನ್ನಡ ಶ್ರೀಮತಿ ನಫೀಜಾ ಫಜಲ್‌ರವರ ಕನ್ನಡಕ್ಕಿಂತ ಚೆನ್ನಾಗಿದೆ.

ಅಧ್ಯಕ್ಷರು : ಮಾನ್ಯ ಬಚ್ಚೇಗೌಡರವರೇ, ತಾವುಗಳು ದಯವಿಟ್ಟು ಕುಳಿತುಕೊಳ್ಳಿ.. ಅವರ ಮೇಲೆ ತಾವೇಕೆ ಆರೋಪ ಮಾಡುತ್ತಿದ್ದೀರಿ?

ಶ್ರೀಮತಿ ನಫೀಸಾ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಆಯುರ್ವೇದ ಹೋಮಿಯೋಪಥಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ ನನ್ನದು ಒಂದು ಮಾತು. ನಾನು ಸದನದಲ್ಲಿ ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಸದಸ್ಯರು ನನ್ನ ಮೇಲೆ ಸುಮ್ಮನೆ ಆರೋಪ ಮಾಡುತ್ತಿದ್ದಾರೆ. ನನಗೆ ಕನ್ನಡ ಗೊತ್ತಿಲ್ಲವೆಂದು ಅವರು ಹೇಳುತ್ತಾರೆ. ನನಗೆ ಅವರಿಗಿಂತ ಚೆನ್ನಾಗಿ ಕನ್ನಡ ಬರುತ್ತದೆ. ಸದಸ್ಯರು ಸುಮ್ಮನೆ ನನ್ನ ಮೇಲೆ ಯಾವಾಗಲೂ ಹೀಗೆ ಭಾಷಾ ವಿಷಯದಲ್ಲಿ ಧಾಳಿ ಮಾಡುವುದು ಸರಿಯಲ್ಲ.. ನಾನು ನನ್ನ ಪಾಡಿಗೆ ಕುಳಿತಿದ್ದೇನೆ. ಯಾವುದೋ ಒಂದು ನೆಪ ಮಾಡಿಕೊಂಡು ನನ್ನ ಮೇಲೆ ಹೀಗೆ ಆರೋಪ ಮಾಡುವುದು ಸರಿಯಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಅವರಿಬ್ಬರೂ ಕನ್ನಡಿಗರಲ್ಲದಿದ್ದರೂ ಕನ್ನಡದಲ್ಲಿ ಮಾತನಾಡಲು ಪ್ರಯತ್ನ ಮಾಡುತ್ತಿದ್ದಾರೆ. ಆ ದೃಷ್ಟಿಯಿಂದ ನಾವು ಸಹಕಾರ ಕೊಡಬೇಕಾಗುತ್ತದೆ. ನಾವು ಅವರನ್ನು ಪ್ರೋತ್ಸಾಹಿಸಬೇಕು. ಮಾನ್ಯ ಕನ್ನಡ ಸಂಸ್ಕೃತಿ ಸಚಿವಯವರು ಇಲ್ಲಿ ಬಂದಿದ್ದಾರೆ. ದಯವಿಟ್ಟು ಅವರಿಗೆ ಕನ್ನಡ ಕಲಿತುಕೊಳ್ಳಲು ಸಹಕಾರ ಕೊಡಬೇಕು.

ಅಧ್ಯಕ್ಷರು : ಯಾರಾದರೂ ಕನ್ನಡ ಕಲಿಯಬೇಕು ಅಂದರೆ ಶಾಸಕರ ಭವನದಲ್ಲಿ ನಮ್ಮ ಸಚಿವಾಲಯದ ಖರ್ಚಿನಲ್ಲಿ ಕನ್ನಡ ಟೀಚರ್‌ನ್ನು ವ್ಯವಸ್ಥೆ ಮಾಡುತ್ತೇವೆ. ಮಂತ್ರಿಗಳು ಉತ್ತರ ಹೇಳಿ.

ಪ್ರೊ।। ಬಿ.ಕೆ. ಚಂದ್ರೇಶೇಖರ್ : ಸ್ನೇಹಿತರಾದ ಮಾನ್ಯ ಬಚ್ಚೇಗೌಡರು ಸುಮ್ಮನೆ ಜೇನುಗೂಡಿಗೆ ಕೈಹಾಕಿದರು. ಇಲ್ಲದಿದ್ದರೆ ಇಷ್ಟು ಹೊತ್ತಿಗೆ ಉತ್ತರ ಮುಗಿದು ಹೋಗಿರುತ್ತಿತ್ತು.

ಶ್ರೀ ಬಿ.ಎನ್. ಬಚ್ಚೇಗೌಡ : ಜೇನುಗೂಡಿಗೆ ನಾನು ಕೈಹಾಕಿಲ್ಲ. ಅವರು ಹಾಕಿದ್ದು.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೇ, ಅವರು ಅದು ಹಿಂದಿ ಮಾದರಿಯಲ್ಲಿ ಕನ್ನಡ ಮಾತನಾಡಿದ್ದಾರೆ. ನಫೀನಾ ಫಸಲ್‌ರವರು ಇಂಗ್ಲೀಷ್ ಸ್ಟೈಲ್‌ನಲ್ಲಿ ಮಾತನಾಡಿದ್ದಾರೆ. ಮಾನ್ಯ ರಂಗನಾಥರವರು ಎರಡೂ ಮಾತನಾಡಿದ್ದು ನೋಡಿ ನಮ್ಮ ಭಾಷೆ ಹೇಗೆ ಎಂದು ಹೇಳುತ್ತಿದ್ದಾರೆ. ಹೀಗಿರುವಾಗ ಇಲ್ಲಿ ಜೇನುಗೂಡಿಗೆ ಕೈ ಹಾಕುವ ವಿಚಾರ ಎಲ್ಲಿ ಬಂತು ಸ್ವಾಮಿ? ನಫೀಸಾ ಫಜಲ್‌ರವರು ಕನ್ನಡ ಬಚ್ಚೇಗೌಡರಿಗೆ ಯಾವ ಕಾರಣಕ್ಕಾಗಿ ಹಿಡಿಸುತ್ತಿಲ್ಲವೆಂಬುದು ತಿಳಿಯುತ್ತಿಲ್ಲ...

ಅಧ್ಯಕ್ಷರು : ನೀವು ನೀವೇ ಎದ್ದು ಉತ್ತರ ಕೊಡುತ್ತಾ ಹೋದರೆ, ನಾನ್ಯಾಕೆ ಇರಬೇಕು ಇಲ್ಲಿ? ಬಚ್ಚೇಗೌಡರು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಗೀರ್ ಅಹಮ್ಮದ್‌ರವರೇ ತಾವು ದಯವಿಟ್ಟು ಕೂಡಿ. ಕ್ವೊಶ್ಚನ್ ಅವರನ್ನು ಪ್ರಾರಂಭ ಮಾಡಿದ್ದು ದಯವಿಟ್ಟು ಎಲ್ಲರೂ ಕೂಡಿ ರಾಹುಕಾಲದಲ್ಲಿ ಅಂತ ಕಾಣುತ್ತದೆ.

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ತರಹದ ಸಮಸ್ಯೆಗಳಿಗೆ ಒಂದು ವಿಶೇಷವಾದ ಮೂಲ ಇದೆ. ಪ್ರಶ್ನೆ ಪತ್ರಿಕೆಗಳ ಗೌಪ್ಯತೆಯನ್ನು ಕಾಪಾಡುವುದು ಅತಿ ಮುಖ್ಯವಾದ ವಿಚಾರ. ಅದು ಲೀಕ್ ಅದರೆ ತೊಂದರೆ ಆಗುತ್ತದೆ. ಆದ್ದರಿಂದ ಕಳೆದ ಎರಡು ಮೂರು ವರ್ಷಗಳಲ್ಲಿ ಏನು ಮಾಡಿದ್ದಾರೆ ಅಂದರೆ ಮುದ್ರಕರ ಆ ತರಹ ನಮಗೆ ಯಾವುದೇ ದೂರು ಬಂದಿರಲಿಲ್ಲ. ಇದನ್ನು ಸ್ವಲ್ಪ ಇಂಪ್ರೂವ್ ಮಾಡಬೇಕೆಂದು ಇಲ್ಲಿ ಇರುವ ಜನರನ್ನು ಉಪಯೋಗಿಸಿ ಮರಾಠಿಗೆ ಭಾಷಾಂತರಿಸುವ ಬದಲು ತಾವುಗಳು ಹೇಳಿದ ಹಾಗೆ ಮಹಾರಾಷ್ಟ್ರದಲ್ಲಿ ಈ ವಿಷಯದಲ್ಲಿ ಈ ಭಾಷೆಯಲ್ಲಿ ಪರಿಣತಿ ಪಡೆದು ಕೊಂಡಿರುವ ಜನರಿಂದ ಭಾಷಾಂತರಗೊಳಿಸಿಕೊಳ್ಳಬೇಕೆಂದು ಹೇಳಿ ಮುದ್ರಕರ ಹಂತದಲ್ಲಿಯೇ ಅದನ್ನು ಮಾಡಿಸಿದ್ದಾರೆ. ಈ ಸಾರಿ ಕೆಲವೊಂದು ತಪ್ಪುಗಳು ಬಂದಿರುವುದು ನಿಜ, ಇಲ್ಲವೆಂದಲ್ಲ. ತಾವುಗಳು ಹೇಳಿದ್ದು ಸರಿ. ಆ ತಪ್ಪು ಬಂದಿತ್ತು. ಅವರು ಏನು ಮಾಡಿದ್ದಾರೆ ಅಂದರೆ ಅದನ್ನು ಅಡು ಭಾಷೆಯಲ್ಲಿ ಮಾಡಬೇಕೇ, ಅಥವಾ ಕ್ಲಾಸಿಕಲ್ ಟೆಕ್ಸ್‌ಚುಯಲ್ ಲ್ಯಾಂಗುವೇಜ್‌ನಲ್ಲಿ ಮಾಡಬೇಕು ಎನ್ನುವ ಒಂದು ಜಿಜ್ಞಾಸೆಯು ಭಾಷಾಂತರ ಮಾಡುವವರಲ್ಲಿ ಬಂದಿತ್ತು ಎಂದು ಕಾಣುತ್ತೆ. ಅದರಲ್ಲಿ ಸ್ವಲ್ಪ ಮಿಸ್ ಅಂಡರ್‌ಸ್ಟಾ ಂಡಿಂಗ್ ಬಂತು. ಅದನ್ನು ಓದಿಕೊಳ್ಳುವುದು... ಮೂಲಭೂತವಾಗಿ ಇರುವ ಇಶ್ಯೂ ಸಬ್‌ಸ್ಟೆನ್ಸ್ ಬಗ್ಗೆ ಏನೂ ಗೊಂದಲವಿರಲಿಲ್ಲ. ಭಾಷೆಯ ಪದ ಪ್ರಯೋಗದ ಬಗ್ಗೆ ಗೊಂದಲವಾಯಿತು ಎಂದು ನನಗೆ ತಿಳಿದು ಬಂದಿದೆ. ಆದರೆ ಏನು ಮಾಡಿದ್ದಾರೆ ಅಂದರೆ, ಸ್ವಲ್ಪ ಗ್ರೇಸ್ ಮಾರ್ಕ್ಸ್ ಕೊಟ್ಟು ಯಾರಿಗೆ ತೊಂದರೆಯಾಗಿತ್ತು ಅವರಿಗೆ ಭಾಷಾಂತರದಿಂದ ಉಂಟಾದ ಗೊಂದಲದ ತೊಂದರೆ ಇತ್ತು, ಅವರಿಗೆ ತೊಂದರೆಯಾಗದೇ ಇರುವ ಹಾಗೆ ಮಾಡಿ, ವೈಟೇಜ್ ಕೊಟ್ಟು ಯಾವುದೋ ಒಂದು

ಅನುಪಾತವನ್ನು ವೈಟೇಜ್ ಕೊಟ್ಟು ಅದು ಆಯಿತು. ಮತ್ತೊಂದು ವಿಚಾರ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ. ಸುಮಾರು 12 ಸಾವಿರ ವಿದ್ಯಾರ್ಥಿಗಳು ಹೆಚ್ಚು ಕಡಿಮೆ ಏನು ಮರಾಠಿಯಲ್ಲಿ ಬರೆಯುತ್ತಾರೆ, ಅದರಲ್ಲಿ ಗಣಿತ ಒಂದು ವಿಷಯ ತೆಗೆದುಕೊಂಡು ಹೇಳುವುದಾದರೆ, ಪಾಸ್ ಪರ್‌ಸೆಂಟೇಜ್ ಎಷ್ಟೆತ್ತು ಅಂದರೆ 49-53ರ ವರೆಗೆ ಇತ್ತು. ಈ ಸಾರಿ ಅದು 60 ಪರ್‌ಸೆಂಟ್‌ಗಳಷ್ಟು ಹೆಚ್ಚು ಆಗಿದೆ. ಹೀಗೆ ಹೆಚ್ಚು ಆಗಿರುವುದು ಬಹಳ ಉತ್ತೇಜನಕಾರಿಯಾದ ವಿಚಾರವಾಗಿದೆ. ಅದು ಇನ್ನೂ ಹೆಚ್ಚು ಆಗಬೇಕು. ಆಗಿರುವ ಮಿಸ್ಟೇಕ್‌ನ್ನು ನಾವು ಏನು ಗ್ರೇಸ್‌ಮಾರ್ಕ್ಸ್ ಕೊಟ್ಟು ಸರಿಪಡಿಸಿದ್ದೇವೆ ಅದು ಫರ್‌ಪೆಕ್ಟ್ ಸಲ್ಯೂಶನ್ ಆಗುವುದಿಲ್ಲ. ಆದರೆ ಇನ್ನೂ ಉತ್ತಮ ಭಾಷಾಂತರ ಮಾಡುವ ಜನರನ್ನು ಕರೆಸಿಕೊಂಡು, ಮುಂದಿನ ವರ್ಷದ ಪ್ರಶ್ನೆ ಪತ್ರಿಕೆ ತಯಾರು ಮಾಡುವುದಕ್ಕಿಂತ ಮುಂಚೆ ಅವರ ಜೊತೆಗೆ ಚರ್ಚೆ ಮಾಡಿ, ಯಾವ ಭಾಷೆಯಲ್ಲಿ ಆ ಪ್ರದೇಶದ ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಮಾಡಬೇಕೆನ್ನುವ ವ್ಯವಸ್ಥೆ ಈಗಾಗಲೇ ನಾವು ಮಾಡಿದ್ದೇವೆ. ಮಾನ್ಯ ಸದಸ್ಯರ ಎರಡನೇ ಪ್ರಶ್ನೆಯಲ್ಲಿ ಅವರ ಉದ್ದೇಶ ಬೇರೆ ಇತ್ತು ಎಂದು ಕಾಣುತ್ತದೆ. ಮುದ್ರಣದ ತಪ್ಪಿನಿಂದಾಗಿ ಮುಗ್ಧ ವಿದ್ಯಾರ್ಥಿಗಳು ಮರಣ ಹೊಂದಿದ್ದಾರೆ ಎಂದು ಹೇಳುತ್ತಾರೆ. ಅದು ಸರಿಯಲ್ಲ. ಆದೃಷ್ಟವಶಾತ್ ಯಾರೂ ಮರಣ ಹೊಂದಿಲ್ಲ. ತೊಂದರೆಯಾದದ್ದು ನಿಜ. ಆ ತೊಂದರೆಯು ಮುಂದಿನ ವರ್ಷ ಆಗದಿರುವ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ ಎಂಬ ನಿಶ್ಚಿತವಾದ ಭರವಸೆಯನ್ನು ನಾನು ಅವರಿಗೆ ಕೊಡಲು ಇಷ್ಟಪಡುತ್ತೇನೆ.

ಶ್ರೀ ಮನೋಹರ ಪೊನ್ನಪ್ಪ ಕಡೋಲ್ಕರ್ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಹೇಳಿದ್ದಾರೆ....

ಗೊಂದಲ

ಶ್ರೀ ರಮೇಶ್ ಕುಮಾರ್ ಪಾಂಡೆ : ಮಾನ್ಯ ಅಧ್ಯಕ್ಷರೇ, ಮರಾಠಿ ಭಾಷೆಗೆ ಸಂಬಂಧಪಟ್ಟ ಸಬ್‌ಜೆಕ್ಟ್ ನನ್ನಲ್ಲಿಯೂ ಕೂಡ ಬರುತ್ತದೆ. ಮಾನ್ಯ ಸಚಿವರು ಏನು ತಿಳಿಸಿದ್ದಾರೆ ಮೊನ್ನೆ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಮರಾಠಿ ಮೀಡಿಯಂ ಗಣಿತ ಮತ್ತು ಕೆಲವೊಂದು ಪ್ರಶ್ನೆ ಪತ್ರಿಕೆಗಳಲ್ಲಿ ಏನು ತಪ್ಪಾಗಿತ್ತು ಅದಕ್ಕೆ ಸರಕಾರದವರು ಗಮನಕೊಟ್ಟು ಗ್ರೇಸ್ ಮಾರ್ಕ್ಸ್ ಕೊಟ್ಟು ಸ್ಟೂಡೆಂಟ್ಸ್‌ಗೆ ಯಾವ ಲುಕ್ಸಾನು ಆಗಿಲ್ಲ. ಅದರೂ ಕೂಡ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮತ್ತು ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಎಲ್ಲೆಲ್ಲಿ ಮರಾಠಿಮೀಡಿಯಂ ಹೈಸ್ಕೂಲ್ಸ್ ಮತ್ತು ಪ್ರೈಮರಿ ಸ್ಕೂಲ್ಸ್ ಇವೆ, ಅಲ್ಲಿನ ಕನ್ನಡ ಟೀಚರ್ಸ್ ಏನಿದ್ದಾರೆ, ಅವರನ್ನು ಟ್ರಾನ್ಸ್‌ಲೇಷನ್ ಮಾಡಲು ಉಪಯೋಗ ಮಾಡಿಕೊಂಡರೆ ಈ ಪ್ರಶ್ನೆಯು ಉದ್ಭವಿಸುವುದಿಲ್ಲ. ಏಕೆಂದರೆ ಮರಾಠಿಮೀಡಿಯಂ ಶಾಲೆಗಳಲ್ಲಿ ಕನ್ನಡ ಕಲಿಸುವ ಟೀಚರ್ಸ್ ಏನಿದ್ದಾರೆ, ಅವರ ಉಪಯೋಗವನ್ನು ನಾವು ಪಡೆದುಕೊಳ್ಳಬೇಕಾಗುತ್ತದೆ. ಈ ಸಲಹೆಯನ್ನು ನಾನು ಮಾನ್ಯ ಸಚಿವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಮರಾಠಿ ಮೀಡಿಯಂ ವಿದ್ಯಾರ್ಥಿಗಳು ಹೆಚ್ಚಾಗಿ ಬೆಳಗಾಂ, ಬೀದರ್ ಕಡೆಗಳಲ್ಲಿದ್ದಾರೆ. ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಈ ತರಹ ಯಾವ ತೊಂದರೆಯೂ ಮುಂದೆ ಆಗಬಾರದು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಜಿ. ಮುಳೆ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಪತ್ರಿಕೆ ಏನಿತ್ತು ಅದರಲ್ಲಿ ಪ್ರಿಂಟಿಂಗ್ ಮಿಸ್ಟೇಕ್ ಇಲ್ಲ. ಟೆಕ್ಸ್ಟ್‌ಬುಕ್ ಒಂದು ಇದ್ದರೆ, ಪ್ರಶ್ನೆಯೇ ಬೇರೆ ಇತ್ತು. ಆಕಾಡಮಿಕ್ ವರ್ಷದಲ್ಲಿ ಯಾವ ವಿಷಯವನ್ನು ಕಲಿಸಿಲ್ಲ, ಸಬ್‌ಜೆಕ್ಟ್ ಮ್ಯಾಟರ್ ಇಲ್ಲ, ಅಂಥ ಒಂದು ಪ್ರಶ್ನೆ

ಪತ್ರಿಕೆಯು ಅಲ್ಲಿ ಬಂತು. ಆ ಪ್ರಶ್ನೆ ಪತ್ರಿಕೆಯನ್ನು ಟೀಚರ್ಸ್‌ಗೆ ಸಾಲ್ವ್ ಮಾಡಲು ಬರುತ್ತಿಲ್ಲ ಸ್ಟೂಡೆಂಟ್ಸ್ ಹೇಗೆ ಸಾಲ್ವ್ ಮಾಡುತ್ತಾರೆ? ಈ ಪರಿಸ್ಥಿತಿಯನ್ನು ನೋಡಿ ಸೆನ್ಸಿಟಿವ್ ಸ್ಟೂಡೆಂಟ್ಸ್ ಏನಿದ್ದಾರೆ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನಪಟ್ಟರು. ಇದೊಂದು ಬಹಳ ಇರ್‌ರೆಸ್ಪಾನ್ಸಿಬಲ್ ಕೆಲಸವಾಗಿದೆ. ಬೇಜಾವಾಬ್ದಾರಿ ಕೆಲಸವಾಗಿದೆ. ಟೆಕ್ಸ್‌ಬುಕ್‌ನಲ್ಲಿ ಯಾವ ಸಿಲೆಬಸ್ ಇಲ್ಲ, ಅಂಥ ಕ್ವೊಶ್ಚನ್ ಕೇಳುವುದು ತಪ್ಪು ಎಂದು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಈ ಪ್ರಕಾರ ಆಗಬಾರದು. ನಮ್ಮ ಸರಕಾರದಲ್ಲಿ ಇದು ಆಗಬಾರದೆಂದು ನಾನು ಸಲಹೆ ಕೊಡುತ್ತೇನೆ. ಇದು ಬಹಳ ಮಹತ್ವದ ಮತ್ತು ಸ್ಟೂಡೆಂಟ್ಸ್‌ಗಳ ಜೀವನಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಯಾವಾಗ ಪ್ರಶ್ನೆ ಪತ್ರಿಕೆಯೇ ಕರೆಕ್ಟ್ ಇಲ್ಲ, ಆಗ ಪರ್‌ಸೆಂಟೇಜ್ ಆಫ್ ರಿಸಲ್ಟ್‌ನ್ನು ಗ್ರೇಸ್ ಮಾರ್ಕ್‌ಗಳನ್ನು ಕೊಟ್ಟು ಹೆಚ್ಚು ಮಾಡಿದರೆ ಆದರಿಂದ ಏನು ಉಪಯೋಗ? ಪ್ರಶ್ನೆಯೇ ತಪ್ಪಾಗಿದ್ದರೆ ಉತ್ತರ ಪತ್ರಿಕೆಯನ್ನು ಹೇಗೆ ಇವ್ಯಾಲು ವೇಟ್ ಮಾಡುತ್ತೀರಿ? ಪ್ರಶ್ನೆ ತಪ್ಪಿರುವಾಗ 100ರಷ್ಟು ಗ್ರೇಸ್ ಮಾರ್ಕ್ ಕೊಟ್ಟು ಏನು ಉಪಯೋಗ ಬಂತು?

ಪ್ರೊ।। ಬಿ.ಕೆ. ಚಂದ್ರೇಶೇಖರ್ : ಮಾನ್ಯ ಅಧ್ಯಕ್ಷರೇ, ನಾನು ಅವಾಗಲೇ ಹೇಳಿದ್ದೇನೆ. ಈ ತಪ್ಪು ಆಗಿ ಹೋಗಿ ಬಿಟ್ಟಿದೆ. ಇದರಿಂದಾಗಿ ಅವರಿಗೆ ಯಾವ ರೀತಿಯಲ್ಲೂ ಫೀನಲೈಸ್ ಮಾಡಬಾರದು ಎಂದು ಯಾವುದೇ ಒಂದು ಫಾರ್ಮೂಲಾ ಕಂಡುಹಿಡಿದು ಅವರಿಗೆ ತೊಂದರೆಯಾಗದ ರೀತಿಯಲ್ಲಿ ಈ ಸಾರಿ ಮಾಡಿದ್ದೇವೆ. ಮುಖ್ಯವಾದ ವಿಚಾರ, ಈ ಬಗ್ಗೆ ಗೌಪ್ಯತೆ ಕಾಪಾಡಿಕೊಳ್ಳಬೇಕು. ಯಾವ ಶಿಕ್ಷಕರನ್ನು, ಎಲ್ಲಿ ಹಿಡಿದು ಯಾವ ರೀತಿಯಲ್ಲಿ ಭಾಷಾಂತರ ಮಾಡಬೇಕೆಂಬುದನ್ನು ನಾವು ಬಹಳ ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ. ಈ ತಪ್ಪು ಪುನಃ ಮುಂದಿನ ವರ್ಷದಿಂದ ಆಗದಿರುವ ಹಾಗೆ ನಾನು ನೋಡಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು. ಇವೊತ್ತು ಉಳಿದಿರುವ ಪ್ರಶ್ನೆಗಳನ್ನು ನಾನು ಮುಂದಿನ ವಾರದಲ್ಲಿ ತೆಗೆದುಕೊಳ್ಳುತ್ತೇನೆ.

ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಎ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅಧ್ಯಕ್ಷರೇ, ದಿನಾಂಕ 24-07-2002ರ ಲಿಖಿತ ಮೂಲಕ ಉತ್ತರಿಸುವ 128 ಪ್ರಶ್ನೆಗಳ ಪೈಕಿ 105 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಗಿದೆ. ಅನುಬಂಧ-1 ಇನ್ನು ಮುಂದೆ ಶೂನ್ಯ ವೇಳೆ.

ಶ್ರೀ ಎ.ರಾಮದಾಸ್ : ಅಧ್ಯಕ್ಷರೆ, ಇವೊತ್ತು ಆರೇ ಪ್ರಶ್ನೆ ಆಗಿದ್ದು.

ಅಧ್ಯಕ್ಷರು : ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. You are a witness to my helplessness. ಆದರೆ ಲ್ಯಾಪ್ಸಾಗುವುದಿಲ್ಲ, ಮುಂದಿನ ವಾರದಲ್ಲಿ ತೆಗೆದುಕೊಳ್ಳುತ್ತೇವೆ. ಎದ್ದು ನಿಂತುಕೊಳ್ಳುವ 30-40 ಜನ ನಿಮ್ಮಷ್ಟೇಹಿತರಿದ್ದಾರಲ್ಲಾ ಅವರು ಇದನ್ನು ಅರ್ಥ ಮಾಡಿಕೊಳ್ಳಬೇಕು. ಲ್ಯಾಪ್ಸಾಗುವುದಿಲ್ಲ ದೇವು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಗಳು :

ವಿಷಯ : ನಾಗರಹೊಳೆ ಅಭಯಾರಣ್ಯದ ಸಮೀಪದ ವೀರನ ಹೊನ್ನಳ್ಳಿ ಎಂಬ ಅರಣ್ಯದ ವ್ಯಾಪ್ತಿಯಲ್ಲಿ ಬೆಳೆದು ನಿಂತಿರುವ ಶ್ರೀಗಂಧ ಮತ್ತು ತೇಗದ ಮರಗಳನ್ನು ಕಡಿದು ಸಾಗಿಸುತ್ತಿರುವ ಬಗ್ಗೆ.